ಶ್ರೀ ಬಿ. ಎಲ್. ಶಂಕರ್ (ಯುವ ಜನ ಸೇವಾ ಮತ್ತು ಕ್ರೀಡಾ ರಾಜ್ಯ ಮಂತ್ರಿಗಳು).—

ಅ) ಬಂದಿದೆ.

ಆ) ಈ ಕ್ರೀಡಾಂಗಣ ನಿರ್ಮಾಣವನ್ನು ದಾವಣಗೆರೆಯ ನಗರ ಸಭೆಯಂವರು ಮಾಡುತ್ತಿದ್ದಾರೆ, ಅವರ ಕೋರಿಕೆಯ ಮೇರೆಗೆ ಸರ್ಕಾರ ಇದುವರೆವಿಗೆ ೧ ಲಕ್ಷ ರೂಗಳನ್ನು ಧನಸಹಾಯವಾಗಿ ಬಿಡುಗಡೆ ಮಾಡಿದೆ.

ಚಿಕ್ಕಮಗಳೂರು ನಗರದ ೩ ಕಿ. ಮೀ. ಸುತ್ತ ಹಸಿರು ಪಟ್ಟಿ ಪ್ರದೇಶವನ್ನು ಘೋಷಿಸುವುದು

೭೦೦ ಶ್ರೀ ಐ. ಬಿ. ಶಂಕರ್ (ಚಿಕ್ಕಮಂಗಳೂರು).— ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಎ) ಸರ್ಕಾರ ನಗರಗಳ ಸುತ್ತ ಹಸಿರು ಪಟ್ಟಿ ಘೋಷಿಸಿದ್ದು ಇದು ಎಲ್ಲಾ ನಗರಗಳಿಗೂ ಏಕ ರೂಪವಾಗಿರುವುದರಿಂದ ಸಣ್ಣ ಪುಟ್ಟ ನಗರಗಳ ಬೆಳವಣಿಗೆಗೆ ಪ್ರತಿಕೂಲವಾಗಿರುತ್ತದೆಂಬ ಅಂಶ ಸರ್ಕಾರ ಗಮನಿಸಿದೆಯೆ ?

ಬಿ) ಹಾಗಿದ್ದಲ್ಲಿ ಚಿಕ್ಕಮಗಳೂರು ನಗರದ ೩ ಕಿ. ಮೀ. ಸುತ್ತಳತೆಗೆ ಮಾತ್ರ ಹಸಿರು ಪಟ್ಟಿ ಪ್ರದೇಶವನ್ನು ಘೋಷಿಸಿ ಬೆಳವಣಿಗೆಗೆ ಮಿತಿಗೊಳಿಸುವ ಬಗ್ಗೆ ಸರ್ಕಾರ ಯೋಚಿಸಬಾರದೇಕೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಮಂತ್ರಿಗಳು).—

ಎ) ಕರ್ನಾಟಕದಲ್ಲಿ ಕೇವಲ ೨೬ ಪ್ರಮುಖ ಪಂತ್ತು ತ್ವರಿತವಾಗಿ ಬೆಳೆಯುತ್ತಿರುವ ಪಟ್ಟಣಗಳಿಗೆ ಮಾತ್ರ ಹಸಿರು ಪಟ್ಟಿಯನ್ನು ಘೋಷಿಸಿದ್ದು ಈ ಹಸಿರು ಪಟ್ಟಿಯು ಎಲ್ಲಾ ಪಟ್ಟಣಗಳಿಗೂ ಏಕರೂಪವಾಗಿರುವುದಿಲ್ಲ. ಆದ್ದರಿಂದ ಸಣ್ಣ ಪುಟ್ಟ ನಗರಗಳ ಬೆಳವಣಿಗೆಗೆ ಪ್ರತಿಕೂಲವಾಗುವ ಪ್ರಶ್ನೆ ಉದ್ಭವಿಸುವುದಿಲ್ಲ.

ಬಿ) ಚಿಕ್ಕಮಗಳೂರು ನಗರದ ಸಂವ್ಯವಸ್ಥಿತ ಬೆಳವಣಿಗೆಗಾಗಿ ಸ್ಥೂಲಾಭಿವೃದ್ಧಿ ಯೋಜನೆ ತಯಾರಿಸಲಾಗಿದ್ದು, ಇದಕ್ಕೆ ಸರ್ಕಾರವು ಅನುಮೋದನೆಯನ್ನು ನೀಡಿದೆ, ಈ ಯೋಜನೆಯಲ್ಲಿ ನಗರದ ವಿವಿಧ ಬೆಳವಣಿಗೆಗೆ ಬೇಕಾದ ಪ್ರದೇಶವನ್ನು ಹೊರತುಪಡಿಸಿ, ಯೋಜನಾ ಪ್ರದೇಶದಲ್ಲಿ ಉಳಿದ ೩೭ ಚ. ಕಿ. ಮೀ. ಪ್ರದೇಶವನ್ನು ಹಸಿರು ಪಟ್ಟಿ ಎಂದು ನಿಗಧಿ ಪಡಿಸಲಾಗಿದೆ. ಈ ಹಸಿರು ಪಟ್ಟಿಯು ಎಲ್ಲೆಯು ಮುನಿಸಿಪಲ್ ಎಲ್ಲೆಯಿಂದ ಕೆಲವು ಕಡೆ ೩ ಕಿ. ಮೀ. ಗಿಂತ ಜಾಸ್ತಿಯೂ ಮತ್ತು ಕೆಲವು ಕಡೆ ೩ ಕಿ. ಮೀ. ಗಿಂತ ಕಡಿಮೆ ಆಗಲು ಇರುತ್ತದೆ.

ನಿಪ್ಪಾಣಿ ಪಟ್ಟಣಕ್ಕೆ ಕುಡಿಯುವ ನೀರಿನ ಅಭಾವವನ್ನು ನೀಗಿಸುವುದು

೯೨೨ ಶ್ರೀ ವೀರಕುಮಾರ ಎ. ಪಾಟೀಲ್ (ನಿಪ್ಪಾಣಿ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಎ) ನಿಪ್ಪಾಣಿ ಪಟ್ಟಣದಲ್ಲಿ ಕುಡಿಯುವ ನೀರಿನ ತೀವ್ರ ಅಭಾವವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ

ಆ) ನಿಪ್ಪಾಣಿ ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ಮಾಡುವ ಯೋಜನೆಯಂ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಲ್ಲಿ ಬಹಳ ದಿನಗಳಿಂದ ಉಳಿದಿರುವುದು ನಿಜವೇ

ಇ) ಹಾಗಿದ್ದಲ್ಲಿ ನಿಪ್ಪಾಣಿ ಪಟ್ಟಣದ ಕುಡಿಯುವ ನೀರಿನ ಅಭಾವವನ್ನು ಪರಿಹರಿಸಲು ಸರ್ಕಾರವು ಅತಿ ತೀವ್ರವಾಗಿ ನೀರಿನ ಯೋಜನೆಯಂನ್ನು ಅನುಮೋದಿಸುವುದೇ ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ಬಂದಿದೆ

ಅ) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಅಂದಾಜನ್ನು ತಾಂತ್ರಿಕ ಉಪಯುಕ್ತತೆ ಬಗ್ಗೆ ಪರಿಶೀಲಿಸುತ್ತಿದೆ.

ಇ) ಪರಿಶೀಲಿಸಿದ ಅಂದಾಜನ್ನು ಮಂಡಳಿಯು ಸರ್ಕಾರಕ್ಕೆ ಕಳುಹಿಸಿಕೊಟ್ಟ ನಂತರ ಸರ್ಕಾರವು ಸೂಕ್ತ ಕ್ರಮವನ್ನು ತೆಗೆದುಕೊಳ್ಳುವುದು.

ಬಳ್ಳಾರಿಯಲ್ಲಿ ಶಾದಿ ಮಹಲ್ ಕಟ್ಟಲು ನಿವೇಶನ ಮಂಜೂರಾತಿ

೩೩೮. ಶ್ರೀ ಎಂ. ರಾಮಪ್ಪ (ಬಳ್ಳಾರಿ).—ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಬಳ್ಳಾರಿ ನಗರದ ಮುಸ್ಲಿಂ ಜನಾಂಗದ ಶಾದಿ ಮಹಲ್ ಕಮಿಟಿಯವರು ಸರ್ಕಾರಕ್ಕೆ ಮನವಿ ಸಲ್ಲಿಸಿ, ಈ ಕಟ್ಟಡ ಕಟ್ಟಲು ಪ್ರತ್ಯೇಕವಾಗಿ ನಿವೇಶನ ಮಂಜೂರು ಮಾಡುವ ವಿಚಾರದ ಬಗ್ಗೆ ಮನವಿಯನ್ನು ಸಲ್ಲಿಸಿದ್ದಾರೆಯೇ

ಆ) ಈ ನಿವೇಶನ ಮಂಜೂರು ಮಾಡುವ ವಿಚಾರದಲ್ಲಿ ಸರ್ಕಾರದವರು ಯಾವ ರೀತಿಯ ಕ್ರಮ ಕೈಗೊಂಡಿದ್ದಾರೆಯೇ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ ಪಂಚಾಯತ್ ಹಾಗೂ ವಕ್ಫ್ ಮಂತ್ರಿಗಳು).—

ಅ) ಹೌದು

ಆ) ಸರ್ಕಾರದ ಪರಿಶೀಲನೆಯಲ್ಲಿದೆ.

ಜಿಲ್ಲೆಗಳಲ್ಲಿ ನಗರಾಭಿವೃದ್ಧಿ ಪ್ರಾಧಿಕಾರಗಳನ್ನು ರಚಿಸುವುದು.

೩೩೯. ಶ್ರೀಮತಿ ಮುಕ್ತರುನ್ನೀಸಾ (ನರಸಿಂಹರಾಜ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಸರ್ಕಾರವು ಜಿಲ್ಲೆಗಳಲ್ಲಿ ನಗರಾಭಿವೃದ್ಧಿ ಪ್ರಾಧಿಕಾರಗಳನ್ನು ರಚಿಸಲು ತೀರ್ಮಾನಿಸಿದೆಯೇ ?

(ಆ) ಇವನ್ನು ಯಾವಾಗ ರಚಿಸಲಾಗುವುದು ಮತ್ತು ಆಯ್ಕೆಯಾಗಿರುವ ಜಿಲ್ಲೆಗಳಾವುವು ?

(ಇ) ಹಾಗಾದರೆ, ಈ ಪ್ರಾಧಿಕಾರಗಳ ನೀತಿಗಳು ಮತ್ತು ಕಾರ್ಯಕ್ರಮಗಳು.

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

(ಅ) ಹೌದು.

(ಆ) ಇತ್ತೀಚೆಗೆ ಅಭಿವೃದ್ಧಿ ಪ್ರಾಧಿಕಾರಗಳು ರಚನೆಯಾಗಿರುವ ನಗರ ಪ್ರದೇಶಗಳೆಂದರೆ (೧) ಕಾರವಾರ (೨) ಮಂಗಳೂರು (೩) ಮೈಸೂರು (೪) ಹುಬ್ಬಳ್ಳಿ-ಧಾರವಾಡ (೫) ಗುಲ್ಬರ್ಗಾ (೬) ಬೆಳಗಾಂ.

(ಇ) ಪ್ರಾಧಿಕಾರಗಳು ನಗರ ಪ್ರದೇಶಗಳ ಒಡಾವಣೆಗಳ ಯೋಜನೆ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಮಾಡುವವು.